ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 92/2011**

**ಫ್ರಾಸಾ- 33 ಚಾಸಾ- 46**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಹೆಚ್.ಎಂ.ನಾಗರಾಜ್ |
| ತಂದೆಯ ಹೆಸರುಃ | : | ಮರುಳಪ್ಪ |
| ವಯಸ್ಸುಃ | : | 54 ವರ್ಷ |
| ಉದ್ಯೋಗಃ | : | ಜಂಟಿ ನಿರ್ದೇಶಕರು, ತೋಟಗಾರಿಕಾ ಇಲಾಖೆ, |
| ವಾಸ | : | ಮೈಸೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 28-03-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2006ರಿಂದ 2010ರವರೆಗೆ ನಾನು ಹಾಸನ ಜಿಲ್ಲಾ ಪಂಚಾಯತ್ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ12-5-2009ರಂದು ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ಉಪ ಅಧೀಕ್ಷಕರು ಸಿ ಎನ್ ರಂಗಸ್ವಾಮಿ ನಿರ್ವಾಹಕರು, ಕೆ.ಎಸ್.ಆರ್.ಟಿ.ಸಿ. ಇವರ ತೋಟದ ಆದಾಯ ಮತ್ತು ಖರ್ಚಿನ ವಿವರಗಳನ್ನು ಲೆಕ್ಕ ಮಾಡಿಕೊಡಬೇಕೆಂದು ಮನವಿ ಸಲ್ಲಿಸಿದ್ದರು. ಸರ್ಕಾರ ಹೊರಡಿಸಿದ ಸುತ್ತೋಲೆ ಸಂಖ್ಯೆ 35/2009-10 ದಿನಾಂಕ 20-10-2009ರಲ್ಲಿ ಲೋಕಾಯುಕ್ತ ಪ್ರಕರಣಗಳಲ್ಲಿ ಯಾವ ರೀತಿ ಆದಾಯ ಮತ್ತು ಖರ್ಚು ವಿವರಗಳನ್ನು ನಿರ್ಧರಿಸಬೇಕೆಂದು ನಿರ್ದೇಶನ ಇರುತ್ತದೆ. ಅದರಂತೆ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರಾಗಿದ್ದ ಡಿ ಇ ಭಾನುಪ್ರಕಾಶ್ ರವರನ್ನು ನಾನು ನಿಯೋಜಿಸಿದ್ದೆನು. ಸದರಿ

ಸುತ್ತೋಲೆಯಂತೆ ಅವರು ಸ್ಥಳಕ್ಕೆ ಭೇಟಿ ಕೊಟ್ಟು ದಿಃ27-4-2010ರಂದು ನಮಗೆ ವರದಿಯನ್ನು ನೀಡಿರುತ್ತಾರೆ. ಅದನ್ನು ನಾನು ದ್ಲಿ27-4-2010ರ ಪತ್ರದೊಂದಿಗೆ ಪೊಲೀಸ್ ಉಪಅಧೀಕ್ಷಕರಿಗೆ ಕಳುಹಿಸಿರುತ್ತೇನೆ. ಆ ವರದಿ ಮತ್ತು ಪತ್ರ ಹಾಗೂ ವರದಿಯನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-51 ಮತ್ತು 52 ಎಂದು ಗುರುತಿಸಲಾಯಿತು. ನಿಪಿ-52ಕ್ಕೆ ನಾನು ಮೇಲುಸಹಿ ಹಾಕಿರುತ್ತೇನೆ. ಸಾಕ್ಷಿಯು ಗುರುತಿಸಿದ ರುಜುವನ್ನು ಕ್ರಮವಾಗಿ ನಿಪಿ-52(ಎ) ಮತ್ತು ನಿಪಿ-52(1ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಜೆ ಪಿ ಎಸ್ ವಕೀಲರಿಂದಃ**

ನಿಪಿ-52ರಲ್ಲಿ 1992-94ನೇ ಸಾಲಿನಲ್ಲಿ ತೆಂಗು ಅಡಿಕೆಯ ಆದಾಯ ಎಷ್ಟಿತ್ತು ಎಂದು ಕಾಣಿಸಿಲ್ಲ ಎಂದರೆ ನಿಜ. 1992 ರಿಂದ 1994ನೇ ಸಾಲಿನಲ್ಲಿ ಎಪಿಎಂಸಿಯಲ್ಲಿ ಆ ಬೆಳೆಗಳ ಬೆಲೆ ಎಷ್ಟಿತ್ತು ಎಂದು ನಾನು ಪರಿಶೀಲಿಸಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**